

# ವಿಶಾಖಪಟ್ಟಣಂ ಆಶ್ರಮದಲ್ಲಿ 'ದೂರ ಶಿಕ್ಷಣಂ' ಉದ್ಘಾಟನೆ

ಬೇಲೂರು ಮಠದ ವಿವೇಕಾನಂದ ವಿಶ್ವವಿದ್ಯಾನಿಲಯವು ಅಂತರ್ಜಾಲವನ್ನು ಆಧರಿಸಿದ 'ವಿವೇಕ ದಿಶಾ' ಎಂಬ ಹೆಸರಿನ ದೂರ ಶಿಕ್ಷಣ ಕಾರ್ಯಕ್ರಮವನ್ನು ನಡೆಸುತ್ತಿದ್ದು, ಅದು ಪಶ್ಚಿಮ ಬಂಗಾಳದ ೧೩ ಶಾಲೆಗಳನ್ನು ಸಂಪರ್ಕಿಸಿ ತರಗತಿಗಳನ್ನು ನಡೆಸುತ್ತಿದೆ. ಈಗ ವಿಶಾಖಪಟ್ಟಣಂ ರಾಮಕೃಷ್ಣ ಮಿಷನ್ ಆಶ್ರಮದ ವತಿಯಿಂದ ಅದೇ ರೀತಿಯಲ್ಲಿ ತೆಲುಗು ಭಾಷಾ ಪ್ರದೇಶಗಳಲ್ಲಿ ಇಂಥ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಈ ಯೋಜನೆಯನ್ನು ಉದ್ಘಾಟಿಸಿದರು.

ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ತರಗತಿಯ ವಿದ್ಯಾರ್ಥಿಗಳಿಗಾಗಿ ಇಂಗ್ಲಿಷ್ ಹಾಗೂ ತೆಲುಗು ವ್ಯಾಕರಣ ಮತ್ತು ಸಂವಹನದ ಮೂಲಭೂತ ಶಿಕ್ಷಣ, ಸರಳ ವಿಜ್ಞಾನ ಪಾಠಗಳು, ಗಣಿತ ಮುಂತಾದ ವಿಷಯಗಳನ್ನು ಕಲಿಸಲು ಈ ಯೋಜನೆ ಉದ್ದೇಶಿಸಿದೆ. ತಜ್ಞರ ಮೂಲಕ ಅಥವಾ ಶಾಲಾ ದಿನಗಳಲ್ಲಿ ೫ ರಿಂದ ೬ರ ವರೆಗೆ ಈ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ. ಈ ಕಾರ್ಯಕ್ರಮ ಯೋಜನೆಗೆ '**ದೂರ ಶಿಕ್ಷಣಂ** ' ಎಂದು ಹೆಸರಿಡಲಾಗಿದೆ. ಶ್ರೀಕಾಕುಳಂ ಜಿಲ್ಲೆಯ ಭಾವನಪಡು, ಪೂರ್ವ ಗೋದಾವರಿ ಜಿಲ್ಲೆಯ ವೆಟ್ಲಪಾಲೇಂ ಹಾಗೂ ಗುಂಟೂರು ಜಿಲ್ಲೆಯ ಬಾಪಟ್ಲ ಎಂಬ ಪ್ರದೇಶಗಳಲ್ಲಿ ಈಗಾಗಲೇ ಅಗತ್ಯವಾದ ಸವಲತ್ತು, ಸಲಕರಣೆಗಳೊಂದಿಗೆ ಈ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಈ ಕೇಂದ್ರಗಳು ಈಗಾಗಲೇ ವಿದ್ಯಾರ್ಥಿಗಳಿಗಾಗಿ ಶಿಕ್ಷಣ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ.

ಈ ಯೋಜನೆಗಳಿಗೆ ಅಮೆರಿಕದ M/s Balavikas of Fairfax ಸಂಸ್ಥೆಯ ಡಾ. ಜಿ. ವಿ.ವಿ.ರಾವ್ ಅವರ ಮೂಲಕ ಆರ್ಥಿಕ ನೆರವನ್ನು ಪಡೆಯಲಾಗಿದೆ. (ಡಾ. ರಾವ್ ಅವರು ದೀರ್ಘಕಾಲದಿಂದ ಆಶ್ರಮದ ಹಿತೈಷಿಗಳಾಗಿದ್ದಾರೆ.)

ಸದ್ಯಕ್ಕೆ ಈ ಮೂರು ಕೇಂದ್ರಗಳಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ನಡೆಸಲು ನಿರ್ಧರಿಸಲಾಗಿದೆ:

೧. ಪ್ರತಿ ಭಾನುವಾರ **ದೂರ ಶಿಕ್ಷಣಂ** ಅಂಗವಾಗಿ ೧೦ ರಿಂದ ೧೧ ರ ತನಕ ನೈತಿಕ ಶಿಕ್ಷಣ ಕಾರ್ಯಕ್ರಮ, ವೇದಮಂತ್ರ, ಗೀತಾಪಠಣ, ಭಜನೆ, ಮೌಲ್ಯಶಿಕ್ಷಣ ತರಗತಿ, ವೀಡಿಯೋ



ಪ್ರದರ್ಶನದ ಮೂಲಕ ಕಥಾನಿರೂಪಣೆ, ಸುಭಾಷಿತಗಳ ಅರ್ಥವಿವರಣೆ, ಕರಕುಶಲ ಕಲೆ ಇತ್ಯಾದಿ.

೨. ಭಕ್ತರಿಗಾಗಿ ಪ್ರತಿ ತಿಂಗಳ ಮೊದಲ ಬುಧವಾರದಂದು ವಿಶಾಖಪಟ್ಟಣಂ ಆಶ್ರಮದ ಸ್ವಾಮಿಗಳಿಂದ ಪ್ರವಚನ.

೩. ಪ್ರತಿ ತಿಂಗಳ ಎರಡನೇ ಬುಧವಾರದಂದು ಕಾರ್ಯಪ್ರಗತಿ ಕುರಿತ ತಂಡದ ಪ್ರಮುಖರ ಸಭೆ.

೪. ಎಲ್ಲ ಸವಲತ್ತುಗಳಿಂದ ಕೂಡಿದ ಇತರ ರಾಮಕೃಷ್ಣ ಸೇವಾಸಮಿತಿಗಳನ್ನು ಗುರುತಿಸಿ, ಅಲ್ಲೂ ಈ ತರಬೇತಿ ಶಿಕ್ಷಣವನ್ನು ಆರಂಭಿಸುವ ಯೋಜನೆ.

Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020